# ಸುಳ್ಳಿನ ತಲೆಗೆ ಮೊಟಕುವ ಸ್ವಯಂಸೇವಕಿ



■ ಪ್ರವೀಣ ಕುಲಕರ್ಣಿ

ಕೋವಿಡ್ ಸಾವಿನ ಸುಳ್ಳು ವರದಿಗಳು, ಧರ್ಮಾಂಧತೆಯನ್ನು ಬಿತ್ತುವ ಸುದ್ದಿಗಳು, ಅಷ್ಟೇ ಏಕೆ? ನಾಜಿ ಫ್ಯಾನ್ ಕ್ಲಬ್‌ನ ಸುಳ್ಳು ಕಥಾನಕಗಳು – ವಿಕಿಪಿಡಿಯಾದಲ್ಲಿ ಜಗತ್ತಿನಾದ್ಯಂತ ದಾಖಲಾಗುವ ಕೋಟ್ಯಂತರ ಆನ್‌ಲೈನ್ ಮಾಹಿತಿಯಲ್ಲಿ ಇಂತಹ ಹಸಿ ಹಸಿ ಸುಳ್ಳುಗಳನ್ನು, ತಪ್ಪು ತಪ್ಪಾದ ವಿವರಗಳನ್ನು ಹೆಕ್ಕಿ ತೆಗೆಯುವ ಬಹುದೊಡ್ಡ ಸ್ವಯಂಸೇವಕರ ಪಡೆಯೇ ಇದೆ. ದೋಷಗಳನ್ನು ತಿದ್ದುವ ಕಾರ್ಯದಲ್ಲಿ ಈ ಪಡೆ ಸದ್ದಿಲ್ಲದೆ ತೊಡಗಿರುತ್ತದೆ. ಅಂತಹ ಸ್ವಯಂಸೇವಕರಲ್ಲಿ ಸಿಲಿಕಾನ್ ವ್ಯಾಲಿಯ ಸೇನಿಯಾ ಕಾಫ್‌ಮನ್ ಕೂಡ ಒಬ್ಬರು.

ಇಂಟರ್ನೆಟ್ ಬಳಕೆದಾರರು ಸರ್ಚ್ ಎಂಜಿನ್‌ನಲ್ಲಿ ಯಾವುದೇ ಪ್ರಶ್ನೆಯನ್ನು ಕೇಳಿದಾಗ ಮೊದಲು ಪಾಪ್ ಅಪ್ ಆಗುವುದು (ಕಾಣಿಸಿಕೊಳ್ಳುವುದು) ಪ್ರಪಂಚದ ಅತಿದೊಡ್ಡ ಅಂತರ್ಜಾಲ ವಿಶ್ವಕೋಶ ಎನಿಸಿದ ವಿಕಿಪಿಡಿಯಾ. ಉಚಿತ ಮಾಹಿತಿಯ ಅತ್ಯಂತ ಬೃಹತ್ ಹಾಗೂ ಪ್ರಭಾವಶಾಲಿ ಮೂಲ ಇದಾಗಿದೆ. ಅಂತೆಯೇ ಮಾನವ ದೋಷಗಳು ಸಹ ಅದರ ಮಾಹಿತಿಯಲ್ಲಿ ನುಸುಳಿ ಬರುವುದುಂಟು.

ಇಂಟರ್ನೆಟ್ ಸಂಪರ್ಕವನ್ನು ಹೊಂದಿದ ಯಾರು ಬೇಕಾದರೂ ವಿಕಿಪಿಡಿಯಾದಲ್ಲಿ ಹೊಸ ಮಾಹಿತಿಯನ್ನು ಸೇರ್ಪಡೆ ಮಾಡುತ್ತಾ ಹೋಗಬಹುದು. ಜಗತ್ತಿನ ಸುಮಾರು 300 ಭಾಷೆಗಳಲ್ಲಿ ಈ ರೀತಿ ಮಾಹಿತಿ ಸೇರ್ಪಡೆಗೆ ವಿಕಿಪಿಡಿಯಾದಲ್ಲಿ ಅವಕಾಶ ಇದೆ. ಈ ಸೈಟ್‌ನಲ್ಲಿ ಪ್ರತಿಬಿಂಬಿತವಾಗುವ ಮಾಹಿತಿಯನ್ನು ಜಗತ್ತಿನಾದ್ಯಂತ ಹರಡಿಕೊಂಡಿರುವ ಸ್ವಯಂಸೇವಕರು ತಿದ್ದಿ ತೀಡಿ, ಸರಿಯಾದ ವಿವರವನ್ನು ಬಳಕೆದಾರರಿಗೆ ಒದಗಿಸಲು ಶ್ರಮ ಹಾಕುತ್ತಲೇ ಇರುತ್ತಾರೆ.

'ನಾನು ಎಲ್ಲಿಗೇ ಹೋಗಲಿ, ಸದಾ ನನ್ನ ಲ್ಯಾಪ್‌ಟಾಪ್ ಅನ್ನು ಜತೆಯಲ್ಲೇ ಒಯ್ಯುತ್ತೇನೆ. ಇದರಿಂದ ವಿಕಿಪಿಡಿಯಾದ ಮಾಹಿತಿಯನ್ನು ತಿದ್ದಲು ನನಗೆ ಅನುಕೂಲವಾಗುತ್ತದೆ. ಕೆಲವರ ಪಾಲಿಗೆ ಇದೊಂದು ಚಟ. ಆದರೆ, ನನ್ನ ಪಾಲಿಗೆ ಇದೊಂದು ಪ್ಯಾಷನ್' ಎನ್ನುತ್ತಾರೆ ಕಾಫ್‌ಮನ್.

ದ್ವಿತೀಯ ಜಾಗತಿಕ ಮಹಾಸಮರದ ಕುರಿತು ವಿಕಿಪಿಡಿಯಾದಲ್ಲಿ ಒದಗಿಸಲಾಗಿದ್ದ ಮಾಹಿತಿಯ ಕೆಲಭಾಗವನ್ನು ಕಾಫ್‌ಮನ್ ಅವರೇ ತೆಗೆದುಹಾಕಿದ್ದರು. ಅಲ್ಲಿ ಒದಗಿಸಲಾಗಿದ್ದ ಮಾಹಿತಿಗೆ ಯಾವುದೇ ಮೂಲವನ್ನು ಉಲ್ಲೇಖಿಸದಿರುವುದೇ ಅದನ್ನು ತೆಗೆದುಹಾಕಲು ಕಾರಣ ಎಂದು ಅವರು ತಿಳಿಸಿದ್ದರು. ನಾಜಿಗಳು ಮತ್ತು ಜರ್ಮನ್ ಸೇನಾ ಮುಖ್ಯಸ್ಥರ ಕುರಿತು ನಾಜಿ ದಂಡಿನ ಅಭಿಮಾನಿಗಳು ಕಟ್ಟಿದ ಕಲ್ಪಿತ ಕಥೆ ಅದಾಗಿತ್ತು. 'ಆ ಮಾಹಿತಿಯನ್ನು ನಾನು ಅಳಿಸಿಹಾಕಿದ್ದರಿಂದ ಸಂಪಾದಕರೊಬ್ಬರು ನನ್ನನ್ನು ವಿಧ್ವಂಸಕಿ ಎಂದು ಕರೆದರು. ಅವರು ಹಾಗೆ ಕರೆದರೂ ಪರವಾಗಿಲ್ಲ. ತಪ್ಪು ಮಾಹಿತಿ ಜನರಿಗೆ ಹೋಗಬಾರದು ಎನ್ನುವ ನನ್ನ ಕಳಕಳಿ ನನ್ನನ್ನು ತಪ್ಪು ಮಾಡಲು ಬಿಡುವುದಿಲ್ಲ' ಎನ್ನುತ್ತಾರೆ ಕಾಫ್‌ಮನ್.

ಮನುಕುಲದ ಎಲ್ಲ ಜ್ಞಾನ ಶಾಖೆಗಳಿಗೆ ಸಂಬಂಧಿಸಿದಂತೆ ಸಾಧ್ಯವಾದ ಎಲ್ಲ ಮಾಹಿತಿಯನ್ನೂ ಒದಗಿಸುವುದು ವಿಕಿಪಿಡಿಯಾದ ಮಹತ್ವಾಕಾಂಕ್ಷೆ. ಲಾಭದ ಉದ್ದೇಶವಿಲ್ಲದೆ ನಡೆದಿರುವ ಉದಾತ್ತವಾದ ಕೆಲಸ ಇದು. ಹೀಗಾಗಿ ಈ ಕಾರ್ಯದಲ್ಲಿ ಕೈಗೂಡಿಸುವವರಿಗೆ ಸೇವಾ ಶುಲ್ಕವೇನೂ ಸಿಗುವುದಿಲ್ಲ. ಅಲ್ಲಿನ ಮಾಹಿತಿಯನ್ನು ತಿದ್ದುವುದು ಕೂಡ (ವರಮಾನ ರೂಪದ) ಯಾವುದೇ ಪ್ರತಿಫಲ ಇಲ್ಲದ ಕೆಲಸ. ಬದಲು ಆಗಾಗ ಬೈಗುಳ ತಿನ್ನಬೇಕಾಗುತ್ತದೆ. ಹೀಗಿದ್ದೂ ಇಂತಹ ಕೆಲಸವನ್ನು ಅತ್ಯಂತ ಪ್ರೀತಿಯಿಂದ ಮಾಡುತ್ತಿದ್ದಾರೆ ಕಾಫ್‌ಮನ್.

ಈ ಹಿಂದೆ ವಿಕಿಪಿಡಿಯಾದ ಮಾಹಿತಿಯಲ್ಲಿ ತುಂಬಾ ದೋಷಗಳು ಇರುತ್ತಿದ್ದವು. ಕಾಫ್‌ಮನ್ ಅವರಂತಹ ಲಕ್ಷಾಂತರ ಸ್ವಯಂಸೇವಕರ ಬೆಂಬಲದಿಂದ ಆ ದೋಷಗಳು ಈಗ ಕನಿಷ್ಠಮಟ್ಟಕ್ಕೆ ಇಳಿಯುತ್ತಿದ್ದು, ವಿಕಿಪಿಡಿಯಾದ ಮಾಹಿತಿ ಕುರಿತ ವಿಶ್ವಾಸಾರ್ಹತೆ ಹೆಚ್ಚಿದೆ.

'ಯುದ್ಧ ಸಮಯದ ಹತ್ಯಾಕಾಂಡಗಳಂತಹ ದುಷ್ಕೃತ್ಯಗಳನ್ನು ನಿರ್ಲಕ್ಷಿಸಿ, ನಾಜಿ ಸೈನ್ಯವನ್ನು ವಿಕಿಪಿಡಿಯಾದಲ್ಲಿ ವೈಭವೀಕರಿಸುವುದನ್ನು ನೋಡಿ ನನಗೆ ದಿಗ್ಭ್ರಮೆ ಆಗಿತ್ತು. ಅಲ್ಲಿರುವ ಮಾಹಿತಿ ಮೂಲವನ್ನು ನಾನು ತಡಕಾಡಿದೆ. ಒಂದೂ ಸಿಗಲಿಲ್ಲ. ಕಲ್ಪಿತ ಕಥಾನಕಗಳಿವು ಎಂದು ಗೊತ್ತಾಯಿತು. ಇಂತಹ ಆಧಾರರಹಿತ ಮಾಹಿತಿ ತೆಗೆದುಹಾಕಿದಾಗ ನಾನು ತೀವ್ರ ಪ್ರತಿರೋಧ ಎದುರಿಸಬೇಕಾಯಿತು' ಎನ್ನುತ್ತಾರೆ ಕಾಫ್‌ಮನ್. ಸೋವಿಯತ್ ರಷ್ಯಾದಲ್ಲಿ ಜನಿಸಿದ ಅವರು, ಸದ್ಯ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ಪ್ರತೀ ತಿಂಗಳು ಸರಾಸರಿ 200 ಮಾಹಿತಿಗಳ ದೋಷಗಳನ್ನು ಅವರು ತಿದ್ದುತ್ತಾರೆ.

'ವಿಕಿಪಿಡಿಯಾ ಏನು ಯುದ್ಧಭೂಮಿ ಅಲ್ಲ. ಅದೊಂದು ಸ್ಥಿರವಾದ ನೆಲೆ. ಅಲ್ಲಿ ನಿಮ್ಮ ಮನೆಯ ವಿಳಾಸ ಇರಲೇಬೇಕು. ಅಂದರೆ, ನೀವು ಕೊಡುವ ಮಾಹಿತಿಯ ಮೂಲವನ್ನು ಉಲ್ಲೇಖಿಸಲೇಬೇಕು. ಏಕೆಂದರೆ, ಸುರಕ್ಷಿತ, ಸಮರ್ಪಕ ಮತ್ತು ಸರಿಯಾದ ಮಾಹಿತಿಯನ್ನೇ ಬಳಕೆದಾರ ಪಡೆಯುವಂತಾಗಬೇಕು' ಎನ್ನುವುದು ಕಾಫ್‌ಮನ್ ಅವರ ಖಚಿತ ಮಾತು.

ಕಾಫ್‌ಮನ್, ಇದುವರೆಗೆ 97 ಸಾವಿರ ಮಾಹಿತಿಗಳ ದೋಷಗಳನ್ನು ಸರಿಪಡಿಸಿದ್ದಾರೆ. 3,200 ಪುಟಗಳನ್ನು ಸೃಜಿಸಿದ್ದಾರೆ. ಲೆಕ್ಕವಿಲ್ಲದಷ್ಟು ಚರ್ಚೆಗಳಲ್ಲಿ ಪಾಲ್ಗೊಂಡು, ತಾವು ತಿದ್ದಿರುವುದು ಸರಿಯಾಗಿದೆ ಎಂಬುದನ್ನೂ ಸಾಧಿಸಿ ತೋರಿಸಿದ್ದಾರೆ. ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಜ್ಞಾನ ವಿಸ್ತರಣೆ ಕೆಲಸ ಮಾಡುತ್ತಿರುವ ಅವರತ್ತ ವಿಕಿಪಿಡಿಯಾದ ಬಳಕೆದಾರರ ಬಳಗ ಕೃತಜ್ಞತೆಯ ನೋಟವನ್ನು ಬೀರುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65